ಒಡಲೊಳಗೆ ಅರಗಿಸಲಾರದೆ ಒದ್ದಾಡುತ್ತಾ ರಾತ್ರಿಗಳನ್ನು ಸಾಯಿಸುವ ಬಗ್ಗೆ ಹೇಳತೊಡಗಿದಳು. ಇಂಥ ತೀವ್ರತೆಯ ತಲ್ಲಣಗಳ ಬಗ್ಗೆ ಕೇಳುವುದರಲ್ಲಿ ನಿಸ್ಸೀಮ ತನ್ನ ಮುಖವನ್ನು ನುಲಿದುಕೊಂಡು ಅವಳು ಆಕಾಶಕ್ಕೆ ಮುಖವಿಟ್ಟು ಹೇಳುತ್ತಿರುವುದನ್ನು ಆಲಿಸತೊಡಗಿದ. 'ನಮ್ಮ ಜಾತಿಯ ಹುಡುಗಿಯರು ಎಷ್ಟೇ ಓದಿದ್ರೂ ಹಳ್ಳೀಲಿ ಹೇಗಿರಬೇಕಾಗಿರ್ತದೆ ಅಂತಾ ನೀವೇ ನೋಡಿರ್ತಿರಲ್ಲಾ, ನನಗಂತೂ ಯಾವ ದಿಕ್ಕೂ ತೋಚುವುದಿಲ್ಲ' ಎಂದು ತನ್ನ ಕಾಡಿಗೆಯ ಕಣ್ಣುಗಳಲ್ಲಿ ವಿಷಾದವನ್ನು ಚಿಮ್ಮಿಸಿದಳು. 'ಹುಡುಗಿಯರಿಗೆ ಯಾಕೆ ಕೆಲಸ. ಅವರು ಗಂಡಸನ್ನು ಮದುವೆ ಆಗೋದೇ ಒಂದು ಉದ್ಯೋಗ ಅಲ್ವಾ, ಹೇಗಿದ್ರೂ ಊಟ ಬಟ್ಟೆ ಎಲ್ಲಾ ಸಿಗುತ್ತೆ. ತಿಂಗಳ ಸಂಬಳ ಕೂಡ ಇವಳ ಕೈಗೇ ಬಂದು ಬೀಳುತ್ತೆ. ಹಾಗಾಗಿ ಗಂಡಸಿಗಿಂತ ಹೆಣ್ಣೇ ಸುಖಿ. ಅವಳಿಗೆ ಉದ್ಯೋಗದ ಭಯ ಇರಬೇಕಾದ್ದೇ ಇಲ್ಲ' ಎಂದು ಮೊನ್ನೆ ನನ್ನ ಕ್ಲಾಸ್‌ಮೇಟ್ ಹೇಳ್ತಿದ್ದ. ಅವನ ಮಾತಿನಲ್ಲಿ ವ್ಯಂಗ್ಯ ಮತ್ತು ನೋವು ಎರಡೂ ಇದ್ದವೇನೋ. ಆದರೆ ಇಲ್ಲಿ ಮದುವೆಗೂ ಉದ್ಯೋಗಕ್ಕೂ ತನ್ನ ಹೊಟ್ಟೆಬಟ್ಟೆಗೆಲ್ಲ ಒಂದು ಸಂಬಂಧ ಏರ್ಪಟ್ಟು ಮದುವೆ ಎಂಬ ಹೆಸರು ಕೇವಲ ಗಂಡಸು ಹಾಗೂ ಸೆಕ್ಸ್ ಆಗಿ ಮಾರ್ಪಟ್ಟು ತನ್ನ ಇರುವಿಗೆ ಎನ್ನುವುದು ಇರುವೆಗಿಂತ ಕಡಿಮೆಯಾಗಿರುತ್ತದಲ್ಲಾ ಎಂದು ಬೇಸರವಾಗುತ್ತದೆ. ಹಾಗಂತ ಗಂಡಸನ್ನು ನಾನು ಟೀಕಿಸ್ತಿಲ್ಲಾ, ಇದು ಹೆಣ್ಣು ಗಂಡು ಇಬ್ಬರ ದುರಂತ ಆಗಿರ್ತದಲ್ಲವಾ ಎಂದು ನನಗೆ ಅನುಮಾನ? ಎಂದು ತಡೆಯಲಾರದೆ ಹೇಳಿಕೊಂಡಳು. ರಾಜಿಗೆ ಇಷ್ಟೆಲ್ಲ ಅಂತರಾಳದ ಅರಿವು ಇರುವುದಾದರೂ ಹೇಗೆಂಬ ಅನುಮಾನ ಬಂದರೂ ಅವಳ ಎಂಎಸ್ಸಿಗಿಂತಲೂ ಅವಳ ಬದುಕು ಲೋಕವನ್ನು ತಿಳಿಸಿಕೊಟ್ಟಿದೆ ಎನಿಸಿತು. 'ಹೇಳಿ ರಾಜಿ, ನನಗೆ ಇಂಥ ಉರಿವ ಒಡಲಿನ ಅಗ್ನಿ ಎದುರು ವಿಪರ್ಯಾಸಗಳ ಮುಖಾಮುಖಿಯಲ್ಲಿ ಬದುಕಿನ ಸೂಕ್ಷ್ಮವಾದ ಸವಾಲಿನ ಸ್ಥಿತಿಗಳನ್ನು ನೋಡುವುದು ತುಂಬ ಇಷ್ಟ. ಮಾತನಾಡಿ, ಹಿಂದೆ ನಾನು ಪ್ರೀತಿಸಬೇಕು ಎಂದುಕೊಂಡಿದ್ದ ಆ ಮಾಲತಿ ನನಗೆ ತನ್ನ ಅಗ್ರಹಾರದ ಭೀಕರತೆಯನ್ನು ಹೇಳಿಕೊಳ್ಳುವಾಗ ಇಂಥವೇ ಅನುಭವ ಆಗ್ತಿತ್ತು. ಅವಳ ಮಾತು ಒಂದು ದಿಕ್ಕಾದರೆ ನಿಮ್ಮ ಮಾತೇ ಇನ್ನೊಂದು ದಿಕ್ಕು' ಎಂದು ಮತ್ತೆ ಮುಂದುವರಿಸಲು ತಡಕಾಡಿ ನಿಲ್ಲಿಸಿಬಿಟ್ಟ.

'ಇಲ್ಲ, ಒಂಥರಾ ಅನಿಸ್ತು ಹಾಗೆಲ್ಲ ಹೇಳಿಕೊಂಡೆ. ಬೇಡಬಿಡಿ. ಹಾಗೆಲ್ಲ ಕತೆ ಹೇಳ್ಕೊಳ್ಳೋದು ನನಗೆ ಇಷ್ಟ ಇಲ್ಲ' ಎಂದು ತನ್ನ ಕೈಯ ಬಣ್ಣ ಬಣ್ಣದ ಬಳೆಗಳ ಜಳಗುಟ್ಟಿಸಿ ಕೂದಲನ್ನು ನೀವಿಕೊಂಡಳು. ಅವಳ ಕೈ ಬಳೆ ನೋಡಿ ಇವನಿಗೆ ಇನ್ನಷ್ಟು ನೆನಪಾಗಿ, 'ನಿಮ್ಮ ಮೊದಲನೇ ಪರಿಚಯದಲ್ಲಿ ನಾನು ಏನು ಕೇಳಿದ್ದೆ ಹೇಳಿ' ಎಂದ. ಆಕೆ ನೆನಪು ಮಾಡಿ, ಆಗದೆ, ಗೊತ್ತಿಲ್ಲ ಎಂದಳು. 'ನೋಡಿದ್ರಾ ಎಷ್ಟು ಬೇಗ ಮರೀತಿರಿ. ನಿಮ್ಮ ಕೈಲ್ಲಿದ್ದ ಆಗಿನ ಬಳೆಗಳಲ್ಲಿ ಮೆಚ್ಚಿಗೆಯಾದ ಒಂದನ್ನು ಕೇಳಿ ಪಡಕೊಂಡಿರಲಿಲ್ಲವಾ. ಆಗ ಮೃದುವಾಗಿ ನಿಮ್ಮ ಮುಂಗೈ ಚರ್ಮವ ಜಾರಿಸಿಕೊಂಡು ಬಂದಿದ್ದ ಆ ಬಳೆಯನ್ನು ನಾನು ಇಟ್ಟುಕೊಂಡಿರಲಿಲ್ಲವಾ?' ಎಂದು ತಾನೇ ಅದಕ್ಕಾಗಿ ನಾಚಿಕೊಳ್ಳುತ್ತಾ ಆಕೆಯ ಮುಖದಲ್ಲಿ ನಗೆ ಅರಳಿಸಿದ. 'ನಾನು ಈಗ್ಲು ಆ ಬಳೆನಾ ಇಟ್ಕೊಂಡಿದೀನಿ. ಯಾಕೆ ಅಂತಾ ಗೊತ್ತಿಲ್ಲ' ಎಂದ. 'ಸುಳ್ಳು ಹೇಳ್ತೀರಪ್ಪಾ, ಗೊತ್ತಿಲ್ಲದೆ ಇಂಥ ಸಂಗತಿಗಳು ಮುಂದುವರೆಯೋದೇ ಇಲ್ಲ' ಎಂದು ಬಿಮ್ಮಗೆ ಮೈಯನ್ನು ಒಮ್ಮೆ ನುಲಿದು, 'ಅಂತಾ ಬಳೆಗಳನ್ನ ಎಷ್ಟು ಕಲೆಕ್ಟ್ ಮಾಡಿಟ್ಟಿದ್ದೀರಿ' ಎಂದು ಪ್ರಶ್ನಿಸಿ ಅವನ ಬೆಚ್ಚಿಸಿದಳು. 'ಇಲ್ಲ, ನಿಮ್ಮ ಒಬ್ಬರ ಬಳೆ ಮಾತ್ರವೇ ನನ್ನ ಪೆಟ್ಟಿಗೆಯಲ್ಲಿ ಇರುವುದು' ಎಂದು ಹೇಳಿದನಾದರೂ, ಅವನೊಳಗೆ ಒಡೆದ ಬಳೆಯ ಗಾಜು ಚುಚ್ಚಿದಂತಾಗಿ ವಾರಿಜಾಳಿಂದ ಪಡೆದ ಆರು ಬಗೆಬಗೆಯ ಬಣ್ಣದ ಬಳೆಗಳು ಚಿಮ್ಮಿ ಬಂದು ಹಳೆಯ ಸಂಬಂಧಗಳೆಲ್ಲ ಹರಡಿಕೊಂಡವು.

ಅವನ ಹಳೆಯ ದಿನಗಳಲ್ಲೆಲ್ಲಾ ವಾರಿಜಾ ಬಂದು ಹೋಗಿ ಇಲ್ಲಿಗೆ ವರ್ಷ ಕೂಡ ತುಂಬಿರಲಿಲ್ಲ. ವಾರಿಜಾಳ ಚೆಲ್ಲು ಚೆಲ್ಲು ಎನಿಸುವ ವರ್ತನೆ, ನೂರಾರು ಹುಡುಗರ ಪರಿಚಯ, ಹತ್ತಾರು ಜನ